1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.181/2017

ದಿಃ 05.12.2019

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-2 Pw-3

| | | |
|---|---|---|
| ಹೆಸರು | ಃ | ಲಕ್ಷ್ಮಿನರಸಯ್ಯ |
| ತಂದೆಯ ಹೆಸರು | ಃ | ಲೇ. ನರಸಯ್ಯ |
| ವಯಸ್ಸು | ಃ | 49 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಅಯ್ಯಂಡಳ್ಳಿ, ಮಾಗಡಿ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಮೃತ ಹೇಮಂತ ಕುಮಾರ @ ಎಂ ಸಿ ಸ್ವಾಮಿ ನನಗೆ ಗೊತ್ತು. ಆತ ನನ್ನ ಸಂಬಂಧಿ. ಅವರು ದಿಃ30.08.2017ರಂದು ತಿಪ್ಪಗೊಂಡನಹಳ್ಳಿ ಗುಡ್ಡದ ಬಳಿ ಮೃತಪಟ್ಟಿರುತ್ತಾರೆ. ಅದೇ ದಿನ ಬೆಳಿಗ್ಗೆ 9.30 ಗಂಟೆಗೆ ನಾನು ತಿಪ್ಪಗೊಂಡನಹಳ್ಳಿ ಗುಡ್ಡದ ಕಡೆಗೆ ಹೋಗುತ್ತಿದ್ದಾಗ ಪೊಲೀಸರು ರಸ್ತೆಯಲ್ಲಿ ಸಿಕ್ಕಿದ್ದು, ನನ್ನನ್ನು ಗುಡ್ಡದ ಬಳಿ ಕರೆದುಕೊಂಡು ಹೋಗಿರುತ್ತಾರೆ. ನನ್ನೊಂದಿಗೆ ಚಾಸಾ.3, ಚಾಸಾ.4 ಮತ್ತು ಚಾಸಾ.1ರವರು ಇದ್ದರು. ನಾವು ಸ್ದಳಕ್ಕೆ ಹೋಗಿ ನೋಡಿದಾಗ ಸ್ದಳದಲ್ಲಿ ರಕ್ತ ಚೆಲ್ಲಿದ್ದು, ಪೊಲೀಸರು ರಕ್ತ ಹತ್ತಿದ ಮಣ್ಣು ಮತ್ತು

ಮಾದರಿ ಮಣ್ಣನ್ನು ಪ್ರತ್ಯೇಕ ಡಬ್ಬಿಗಳಲ್ಲಿ ಹಾಕಿ, ಸೀಲ್ ಮಾಡಿ, ಸದರಿ ಡಬ್ಬಿಗಳ ಮೇಲೆ ಅಂಟಿಸಲಾದ ಚೀಟಿಗಳಿಗೆ ನಮ್ಮ ಸಹಿ ಪಡೆದರು. ಆದರಂತೆ ನಿ.ಪಿ.13ನ್ನು ಸ್ಥಳದಲ್ಲಿಯೇ ಬರೆದು ನಮ್ಮ ಸಹಿ ಪಡೆದರು. ಸದರಿ ರಕ್ತ ಹತ್ತಿದ ಮಣ್ಣು ಮತ್ತು ಮಾದರಿ ಮಣ್ಣಿನ ಡಬ್ಬಿಗಳನ್ನು ಈಗಾಗಲೇ ಮು.ಮಾ.2 ಮತ್ತು 3 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ ಶ್ರೀ. ಬಿ.ಹೆಚ್.ಸಿ.ಕೆ., ಮತ್ತು ಶ್ರೀ. ಡಿ.ಎನ್.ಹೆಚ್., ವಕೀಲರಿಂದ ಆರೋಪಿಗಳ ಪರವಾಗಿಃ ವಕೀಲರ ಗೈರು ಹಾಜರಿದ್ದು, ಸಕಾರಣವಿಲ್ಲದ್ದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.